೩) ಸೇತು ಬಂಧನ ಕಾರ್ಯಕ್ರಮದಲ್ಲಿ ಸದರಿ ಕೆಲಸಗಳಿಗೆ ಪೆಚ್ಚವಾದ ಹಣ

ವರ್ಷ	ಬಿಜಾಪುರ ವಿಭಾಗ	ಬಾಗಲಕೋಟ ವಿಭಾಗ	ಒಟ್ಟು
	(ಲಕ್ಷ ರೂಪಾಯಿಗಳಲ್ಲಿ)		
೧೯೮೩-೮೪	—	—	—
೧೯೮೪-೮೫	೨.೦೫	೧.೪೧	೩.೪೬
೧೯೮೫-೮೬	೩.೦೩	೨.೧೬	೫.೧೯
೧೯೮೬-೮೭	೧.೧೯	೦.೩೫	೧.೫೪
ಒಟ್ಟು	೬.೨೭	೩.೯೨	೧೦.೧೯

ವಸತಿ ಶಾಸಗಿ ಪ್ರೌಢಶಾಲೆಗಳನ್ನು ಮಂಜೂರು ಮಾಡಿರುವ ಬಗ್ಗೆ

೨೪(೩೨೯) ಶ್ರೀ ನುಲ್ಲಾರಿಗೌಡ ಎಸ್. ಪಾಟೀಲ್(ಸಂಕೇಶ್ವರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ೧೯೮೩ರ ನಂತರ ಎಷ್ಟು ವಸತಿ ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗಿದೆ (ತಾಲ್ಲೂಕುವಾರು ಮಾಹಿತಿಯನ್ನು ಶಾಲೆಯ ಹೆಸರಿನೊಂದಿಗೆ ನೀಡುವುದು).

ಆ) ವಸತಿ ಪ್ರೌಢಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರ ಒಟ್ಟು ಸಂಖ್ಯೆ ಎಷ್ಟು;

೩) ವಸತಿ ಶಾಲೆಗಳಿಗಾಗಿ ನೇಮಕಾತಿ ಹೊಂದಿರುವ ಶಿಕ್ಷಕರ ಸಂಖ್ಯೆ ಎಷ್ಟು ?

ಶ್ರೀ ಡಿ. ಮಂಜುನಾಥ್.—(ಶಿಕ್ಷಣ ಮಂತ್ರಿಗಳು).—

ಆ) ಸರ್ಕಾರಿ ವಸತಿ ಪ್ರೌಢಶಾಲೆಗಳು:

೧. ಬೆಂಗಳೂರು ಜಿಲ್ಲೆ ದೊಡ್ಡಬಳ್ಳಾಪುರ ತಾ|| ಕನಸವಾಡಿ
೨. ಕೊಡಗು ಜಿಲ್ಲೆ, ಮಡಿಕೇರಿ ತಾ|| ನಾಪೋಕ್ಲು
೩. ಧಾರವಾಡಜಿಲ್ಲೆ ಧಾರವಾಡ ತಾ|| ಧಾರವಾಡ(ಟಿಟಿಐ) ಕೇಂದ್ರ
೪. ಬಳ್ಳಾರಿ ಜಿಲ್ಲೆ, ಬಳ್ಳಾರಿ ತಾ|| ಚಳ್ಳಿಗುರ್ಕಿ

ಖಾಸಗಿ ವಸತಿ ಪ್ರೌಢಶಾಲೆಗಳು:

೧. ಶ್ರೀ ಗುದ್ಲಪ್ಪ ಹಳ್ಳಿಕೇರಿ

ಸ್ಮಾರಕ ಗಾಂಧೀಗ್ರಾಮೀಣ ಗುರುಕುಲ ಪ್ರೌಢಶಾಲೆ, ಹೊಸರಿತ್ತಿ ಧಾರವಾಡ ಜಿಲ್ಲೆ

ಆ) ಸರ್ಕಾರಿ ಶಾಲೆಗಳಲ್ಲಿ—೬೨೮
ಖಾಸಗಿ ಶಾಲೆಗಳಲ್ಲಿ—೨೪೦ } ವಿದ್ಯಾರ್ಥಿಗಳು

೩) ಸರ್ಕಾರಿ ಶಾಲೆಗಳು—೫೨
ಖಾಸಗಿ ಶಾಲೆಗಳು—೧೩ } ಶಿಕ್ಷಕರು